ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ: ಸಚುಪ್ರಾ/ಚುನಾವಣೆ/ಇವಿಎಂ/ 14 /2016

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
ದಿನಾಂಕ: 01.06.2016.

**ಸುತ್ತೋಲೆ**

ವಿಷಯ:- ಸಹಕಾರ ಸಂಘಗಳ ಮತ್ತು ಸಹಕಾರಿಗಳ ಆಡಳಿತ ಮಂಡಲಿಗಳ ಚುನಾವಣೆಗಳಲ್ಲಿ ಮತ ಚಲಾಯಿಸಲು ವಿದ್ಯುನ್ಮಾನ ಮತಯಂತ್ರ (EVM) ಉಪಯೋಗಿಸುವ ಕುರಿತು.

ಉಲ್ಲೇಖ:- ಪ್ರಾಧಿಕಾರದ ಪತ್ರ ಸಂಖ್ಯೆ:ಸಚುಪ್ರಾ/ತಿದ್ದುಪಡಿ/23/2015-16 ದಿನಾಂಕ 13.10.2015

★★★

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-14ಕೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-5ಪಿ ಅವಕಾಶದಂತೆ "ಮತದಾನವನ್ನು ನಡೆಸುವ ಪ್ರತಿಯೊಂದು ಚುನಾವಣೆಯಲ್ಲಿ ಮತಗಳನ್ನು ಮತಪತ್ರಗಳ ಮೂಲಕ ನೀಡತಕ್ಕದ್ದು ಮತ್ತು ಚುನಾವಣೆಯಲ್ಲಿ ಮತ ನೀಡುವ ಎಲ್ಲಾ ಮತದಾರರು (ಸದಸ್ಯರು ಅಥವಾ ಪ್ರತಿನಿಧಿಗಳು ಅಥವಾ ಡೆಲಿಗೇಟುಗಳು) ಮತದಾನ ಕೇಂದ್ರದಲ್ಲಿ ಖುದ್ದಾಗಿ ಮತ ನೀಡತಕ್ಕದ್ದು ಮತ್ತು ಯಾವ ಮತವನ್ನೂ ಪ್ರಾಕ್ಸಿ ಮೂಲಕ ದಾಖಲಿಸಲು ಅನುಮತಿಸತಕ್ಕದ್ದಲ್ಲ" ಎಂದು ಇರುತ್ತದೆ.

ಹೆಚ್ಚು ಸಂಖ್ಯೆಯಲ್ಲಿ ಮತದಾರರನ್ನು ಹೊಂದಿರುವ ಸಂಘಗಳು / ಸಹಕಾರಿಗಳು ಚುನಾವಣೆಯನ್ನು ಸುಲಲಿತವಾಗಿ, ಪಾರದರ್ಶಕವಾಗಿ ನಡೆಸುವ ದೃಷ್ಟಿಯಿಂದ ಮತಪತ್ರದ ಮುದ್ರಣದ ಬದಲಾಗಿ ಮತಯಂತ್ರಗಳನ್ನು (EVM-ವಿದ್ಯುನ್ಮಾನ ಮತಯಂತ್ರ) ಬಳಸಲು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-14ಕ್ಕೆ ತಿದ್ದುಪಡಿ ತರಲು ಉಲ್ಲೇಖಿತ ಪತ್ರದಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆ.

ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗಳು ಪ್ರತಿ ತಿಂಗಳು ನಡೆಯುವುದರಿಂದ ಯಾವ ಸಹಕಾರ ಸಂಘಗಳು ಹೆಚ್ಚು ಸಂಖ್ಯೆಯ ಮತದಾರರನ್ನು ಹೊಂದಿದೆಯೋ ಅಂತಹ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳನ್ನು ನಿಯಮಾನುಸಾರ, ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ ಚುನಾವಣೆ ನಡೆಸಲು ಮತಪತ್ರಗಳಿಗೆ ಬದಲಾಗಿ, ಸರ್ಕಾರವು ನಗರಾಡಳಿತ ಹಾಗೂ ಸಾರ್ವತ್ರಿಕ ಚುನಾವಣೆಯಲ್ಲಿ ಬಳಸುವ ಮತಯಂತ್ರಗಳನ್ನು ವಿದ್ಯುನ್ಮಾನ ಮತಯಂತ್ರ (EVM) ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯಲ್ಲಿ ಬಳಸುವಂತೆ ಜಾರಿಗೆ ತರುವುದು ಸೂಕ್ತವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಆದುದರಿಂದ, ಹೆಚ್ಚು ಸಂಖ್ಯೆಯ ಸದಸ್ಯರನ್ನು ಹೊಂದಿರುವ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ನಡೆಸುವ ಸಂದರ್ಭದಲ್ಲಿ ಆಯಾ ಸಹಕಾರ ಸಂಘಗಳ/ಸಹಕಾರಿಗಳು ಮತಯಂತ್ರದ ಮುಖಾಂತರ ಮತ ಚಲಾಯಿಸುವುದು ಸೂಕ್ತವೆನಿಸಿದಲ್ಲಿ ಮತದಾರರ ವಿವರಗಳೊಂದಿಗೆ ಚುನಾವಣಾ ಅಧಿಕಾರಿಗಳ ಮುಖಾಂತರ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಪ್ರಸ್ತಾವೆ ಸಲ್ಲಿಸಿ ಪೂರ್ವಾನುಮತಿ ಪಡೆದು ಮತಪತ್ರಗಳ ಬದಲಾಗಿ ವಿದ್ಯುನ್ಮಾನ ಮತಯಂತ್ರ (EVM) ಬಳಸಲು ಕ್ರಮ ಕೈಗೊಳ್ಳತಕ್ಕದ್ದಾಗಿದೆ.

(ಎನ್.ಸಿ. ಮುನಿಯಪ್ಪ)
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು

--2

ಇವರಿಗೆ:-

1. ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
2. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
3. ಸಹಕಾರ ಸಂಘಗಳ ಜಂಟಿ ನಿಬಂಧಕರು(ಪಟ್ಟಣ ಬ್ಯಾಂಕುಗಳ ವಿಭಾಗ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
4. ಸಹಕಾರ ಸಂಘಗಳ ಜಂಟಿ ನಿಬಂಧಕರು(ಕಾನೂನು ಕೋಶ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
5. ಸಹಕಾರ ಸಂಘಗಳ ಅಪರ ನಿಬಂಧಕರು, ಕಾಡಾ, ಬೆಳಗಾವಿ
6. ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ, ಕಲಬುರಗಿ
7. ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು,

ಪ್ರತಿಗಳು:

1. ಮಾನ್ಯ ಸರ್ಕಾರದ ಅಪರ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು-01.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52
3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರು / ಜಂಟಿ ನಿಬಂಧಕರುಗಳಿಗೆ
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
5. ರಾಜ್ಯದ ಎಲ್ಲಾ ಜಿಲ್ಲೆಗಳ ಆರಕ್ಷಕ ಅಧೀಕ್ಷಕರಿಗೆ
6. ರಾಜ್ಯದ ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು,